ಲೆಕ್ಕಕ್ಕೆ ಸಿಗದಷ್ಟಿದ್ದು ಸದ್ಯಕ್ಕೆ ಎಂದೂ ಮುಗಿಯದ ಕಥೆಗಳಾಗಿದ್ದವು. ಇವನೊಬ್ಬ ಬರೆಯದೆ ಉಳಿದ ದೊಡ್ಡ ಬರಹಗಾರನಾಗಿ ಕಾಣತೊಡಗಿದ. ಈ ಬಗೆಯ ಜನರನ್ನು ಕಂಡರೆ ನನಗೆ ಬಲು ಪ್ರೀತಿ. ಶಿಕಾರಿ ಮಾಡುವ ವ್ಯಕ್ತಿಯ ಮನಸ್ಸು ಪರಿವರ್ತನೆಯಾದರೆ ಆತನೊಬ್ಬ ನಿಸರ್ಗಪ್ರೇಮಿಯಾಗಿ ಬದಲಾಗುತ್ತಾನೆ. ಇಂಥವರ ಮಾತಲ್ಲಿ ಪಶ್ಚಾತ್ತಾಪದ ದನಿಯಿರುತ್ತದೆ. ಆದರೂ ಬಿಜಯ್ ನಡುನಡುವೆ ಹಕ್ಕಿಗಳನ್ನು ಸುಟ್ಟು ತಿಂದ ಅನೇಕ ಕಥೆಗಳನ್ನು ರೋಚಕವಾಗಿ ಸಾಧನೆಯಂತೆ ಹೇಳಿ ಬಿಡುತ್ತಿದ್ದ. ಇದರಲ್ಲಿ ನಿಜವೆಷ್ಟೋ ಸುಳ್ಳೆಷ್ಟೋ? ಅವನಿಗೇ ಗೊತ್ತು! ಇವನ ಮಾತಿಗೆ ನಾವೆಲ್ಲಾ ಹೆಚ್ಚು ಉತ್ಸಾಹ ತೋರಿಸುತ್ತಿದ್ದ ಕಾರಣ ಈತ ಉತ್ಪ್ರೇಕ್ಷೆಗೊಂಡು ಮಾತಾಡುತ್ತಿದ್ದ. ಬರುವ ಪ್ರವಾಸಿಗರ ಮನ ತಣಿಸುವ ರೀತಿಯಲ್ಲೇ ತನ್ನ ನಾಲಿಗೆಯನ್ನು ಹದಮಾಡಿಕೊಂಡಿದ್ದ. ಆಗಾಗ ಸರ್ಕಾರ ಸ್ಟ್ರಿಕ್ಟ್ ರೂಲ್ಸ್ ಮಾಡಿದ್ದು ಒಳ್ಳೆಯದೇ ಆಯಿತು. ಇಲ್ಲದಿದ್ದರೆ ನಾವೆಲ್ಲಾ ಕಾಡಿನ ಜೀವಚರಗಳನ್ನು ಇಷ್ಟೊತ್ತಿಗೆ ತಿಂದು ಮುಗಿಸುತ್ತಿದ್ದೆವು ಎಂದು ನಗುತ್ತಿದ್ದ.

ನಮ್ಮ ಜನ ಸಮುದಾಯದಲ್ಲಿ ಕೆಲ ಹಕ್ಕಿಗಳನ್ನು ಹೊಡೆದು ತಿಂದರೆ ತಮ್ಮ ಕಾಯಿಲೆಗಳು ವಾಸಿಯಾಗುತ್ತವೆ ಎಂಬ ಮೂಢನಂಬಿಕೆಗಳು ಚಾಲ್ತಿಯಲ್ಲಿವೆ. ಹಕ್ಕಿಗಳ ಸರ್ವನಾಶಕ್ಕೆ ಇದೂ ಒಂದು ಕಾರಣವಿದ್ದೀತು. ಬಿಜಯ್‌ನಂತಹ ಜನ ಶಿಕಾರಿ ಶೋಕಿಗೆ, ನಾಲಿಗೆ ಚಪಲಕ್ಕೆ, ನಂತರ ಅದನ್ನೇ ದಂಧೆಗೆ ಬಳಸಿಕೊಂಡವರು. ನಿಸರ್ಗದ ಜೈವಿಕ ಅಂಶಗಳನ್ನು ತಿಂದುಂಡು ಬೆಳೆಯುವ ಹಕ್ಕಿಗಳನ್ನು ನಾವು ಬಡಿದು ಸವಿದರೆ ದೈಹಿಕವಾಗಿ ನಾವು ಶಕ್ತಿಶಾಲಿಗಳಾಗುತ್ತೇವೆ ಎಂಬ ಭ್ರಮೆ ಅನೇಕ ಜನರಲ್ಲಿದೆ. ಕೆಲವು ಬುಡಕಟ್ಟುಗಳಲ್ಲಿ ನವಿಲಿನ ಮಾಂಸ ತಿಂದರೆ ವಿಷದ ಹಾವು ಕಚ್ಚಿದರೂ ನಂಜೇರುವುದಿಲ್ಲ ಎಂಬ ಪ್ರತೀತಿಯಿದೆ. ಹಾವುಗಳನ್ನು ಚಕ್ಕುಲಿ, ಕೋಡುಬಳೆ ತರಹ ಹಿಡಿದು ಮುಕ್ಕುವ ನವಿಲನ್ನು ನೋಡಿದ ಜನ ಈ ತೀರ್ಮಾನಕ್ಕೆ ಬಂದಿರಬಹುದು. ಅಂತಹ ವಿಷದ ಹಾವನ್ನೇ ತಿಂದು ದಕ್ಕಿಸಿಕೊಳ್ಳುವ ನವಿಲನ್ನೇ ನಾವು ತಿಂದರೆ ಅದೇ ಶಕ್ತಿ ನಮ್ಮಲ್ಲಿ ಇಳಿಯುತ್ತದೆ ಎಂಬ ಆಲೋಚನೆ ಮನುಷ್ಯರಲ್ಲಿ ಹುಟ್ಟಿರಬಹುದು. ಬಿದಿರು ಮತ್ತು ಹುಲ್ಲನ್ನು ತಿಂದು ಶಕ್ತಿಶಾಲಿಯಾಗುವ ಆನೆಯನ್ನು ನೋಡಿ ನಾವು ಹುಲ್ಲು ತಿಂದು, ಲದ್ದಿ ಹಾಕಿದರೆ

